ಆರ್ ಬಿ ಐ / 2005 –06 / 241
ಆರ್ ಪಿ ಸಿ ಡಿ . ಪಿ ಎಲ್ ಎನ್ ಎಫ್ ಎಸ್. ಬಿಸಿ. ಸಂಖ್ಯೆ .56 / 06–02.31 / 2005–06

ಡಿಸೆಂಬರ್ 27, 2005

ಅಧ್ಯಕ್ಷರು / ವ್ಯವಸ್ಥಾಪಕ ನಿರ್ದೇಶಕರು
ಎಲ್ಲ ಅನುಸೂಚಿತ ವಾಣಿಜ್ಯ ಬ್ಯಾಂಕುಗಳು
(ಆರ್ ಆರ್ ಬಿ ಗಳು ಮತ್ತು ಎಲ್ ಎ ಬಿ ಗಳು ಸೇರಿದಂತೆ)

ಮಾನ್ಯರೆ,

**ಸಣ್ಣ ಸಾಲ ಪಡೆದ ಖಾತೆಗಳಿಗೆ ಒಂದೇ ಬಾರಿಗೆ ಸಾಲ ಚುಕ್ತಾಮಾಡುವ ಯೋಜನೆ ಮತ್ತು ಹೊಸ ಸಾಲಗಳಿಗೆ ಅರ್ಹತೆ**

ಸಣ್ಣ ಸಾಲ ಪಡೆಯುವವರಿಗೆ ಬ್ಯಾಂಕುಗಳಲ್ಲಿರುವ ಅವರ ಎನ್‌ಪಿಎ ಲೆಕ್ಕಗಳನ್ನು ಚುಕ್ತಾ ಮಾಡಲು ಮತ್ತು ಹೊಸ ಹಣಕಾಸು ನೆರವಿಗೆ ಅರ್ಹರಾಗಲು ಅವಕಾಶ ಕಲ್ಪಿಸುವ ಸಲುವಾಗಿ, ಅಸಲು ಹಣ 25,000/– ರೂಪಾಯಿಗಳಿಗೆ ಸಮನಾಗಿರುವಲ್ಲಿ ಅಥವಾ ಅದಕ್ಕಿಂತ ಕಡಿಮೆ ಇರುವಲ್ಲಿ ಮತ್ತು ಸೆಪ್ಟಂಬರ್ 30, 2005 ರಂದು ಇದ್ದಂತೆ ವಸೂಲಾಗದ ಸಂದೇಹಾಸ್ಪದವಾದ ಮತ್ತು ನಷ್ಟದ ಆಸ್ತಿಯಾಗಿ ಪರಿಣಮಿಸಿರುವಂತಹ ಸಾಲಗಳನ್ನು ಒಂದೇ ಬಾರಿಗೆ ಚುಕ್ತಾ ಮಾಡುವ ಸರಳೀಕೃತ ವ್ಯವಸ್ಥೆಯನ್ನು ಕಲ್ಪಿಸುವಂತೆ ಎಲ್ಲ ಅನುಸೂಚಿತ ಬ್ಯಾಂಕುಗಳಿಗೆ (ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಸ್ಥಳೀಯ ಪ್ರದೇಶ ಬ್ಯಾಂಕುಗಳು ಸೇರಿದಂತೆ) ಸೂಚಿಸಲಾಗಿದೆ.

2. ಒಂದು ವೇಳೆ ಸಾಲಗಳನ್ನು ಸರ್ಕಾರ ಪ್ರಾಯೋಜಿಸಿರುವ ಯೋಜನೆಗಳಡಿಯಲ್ಲಿ ಮಂಜೂರು ಮಾಡಲಾಗಿದ್ದರೆ ಬ್ಯಾಂಕುಗಳು ಎಸ್‌ಎಲ್‌ಬಿಸಿಯು ರೂಪಿಸುವಂಥ ಸ್ಥಿತಿ ನಿರ್ದಿಷ್ಟ ಪ್ರಸ್ತಾವವನ್ನು ಅನುಸರಿಸಿ ಪ್ರತ್ಯೇಕ ಮಾರ್ಗಸೂಚಿಗಳನ್ನು ರೂಪಿಸಬಹುದು.

3. ಆದರೆ, ಈ ವ್ಯವಸ್ಥೆಯಲ್ಲಿ ವಂಚನೆಯ ಮತ್ತು ದುಷ್ಕೃತ್ಯದ ಪ್ರಕರಣಗಳು ಸೇರುವುದಿಲ್ಲ.

4. ಈ ವ್ಯವಸ್ಥೆಯಲ್ಲಿ ಯಾವ ಸಾಲಗಾರರ ಖಾತೆಗಳನ್ನು ಚುಕ್ತಾ ಮಾಡಲಾಗಿದೆಯೋ ಆ ಸಾಲಗಾರರು ಹೊಸ ಸಾಲಗಳಿಗೆ ಪೂರ್ಣವಾಗಿ ಅರ್ಹರಾಗಿರುತ್ತಾರೆ.

5.ಬ್ಯಾಂಕುಗಳು ಸೂಕ್ತವಾದ ಯೋಜನೆಯನ್ನು/ಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಗೊಳಿಸಲು ಕ್ರಮಗಳನ್ನು ಪ್ರಾರಂಭಿಸಬೇಕು.

6. ದಯವಿಟ್ಟು ಸ್ವೀಕೃತಿ ನೀಡಿ.

**ತಮ್ಮ ವಿಶ್ವಾಸಿ**

**(ಜಿ. ಶ್ರೀನಿವಾಸನ್)**
**ಮುಖ್ಯ ಪ್ರಧಾನ ವ್ಯವಸ್ಥಾಪಕರು**